

ಅವರ ಮಾತುಗಳಿಂದ ನನಗೆ ಗೊತ್ತಾಗಿದ್ದಿಷ್ಟು:
ಸತ್ತಿರುವ ಸೂಕ್ಷ್ಮಜೀವಿಗಳದಲ್ಲ ಸಮಸ್ಯೆ
ಕಡಿಮೆಯಾಗಿವೆ ಅವು ಸಾವಿರಗಟ್ಟಲೆ
ಆದರೆ ಬದುಕಿರುವ ಕೆಲವೇ ಕೆಲವು
ತಲೆಕೆಟ್ಟ ಲಕ್ಷಣ ತೋರಿಸುತ್ತಿವೆ
ನನ್ನನವರು ದಿಗಿಲು ಬೀಳಿಸಿ ಬೀಳ್ಕೊಟ್ಟರು

ಸಮಾಧಿ ಅಗೆಯುವವರ ಹುಡುಕಿಕೊಂಡು ಹೋದೆ ನಾನು
ಬಗೆಬಗೆ ಬಣ್ಣ ಬಳಿದ ಶವಗಳನ್ನು
ಸಣ್ಣ ಎಲುಬುಗಳ ದೇಹಗಳನ್ನು
ಭಯಾನಕ ಶಾಪಗಳ ಪ್ರಭಾವಳಿ ಹೊಂದಿದ್ದ ಚಕ್ರವರ್ತಿಗಳ,
ಕಾಲರಾ ಹೆದ್ದೆರೆಯ ಹೊಡೆತಕ್ಕೆ ಹುಡಿಯೆದ್ದಿದ್ದ ಹೆಂಗಸರ
ಹೆಣಗಳನ್ನವರು ಸುಡುತ್ತಿದ್ದ ನದಿಗಳ ಬಳಿ ಹೋದೆ

ಅಲ್ಲಿದ್ದದ್ದು ಬರೀ ಸತ್ತವರೇ ತುಂಬಿದ್ದ ಕಿನಾರೆಗಳು
ಮತ್ತು ಬೂದಿ ಪ್ರವೀಣರು
ನನ್ನನ್ನು ಸುಡಲು ಸಾಧ್ಯವಿದೆಯೆಂದರು
ಗೊತ್ತಿದ್ದದ್ದು ಅದೊಂದೇ ಅವರಿಗೆ

ಕುಡಿತದ ಕೂಟಗಳಲ್ಲಿ
ನನ್ನ ಸ್ವದೇಶವಾಸಿ ಆಡಳಿತಗಾರರು
ಮದ್ಯ ಗುಟುಕರಿಸುತ್ತಾ
ನಡುನಡುವೆ ನನಗೆ ಹೇಳಿದರು
'ಈ ಹುಚ್ಚಾಟ ಬಿಟ್ಟುಬಿಡು, ಹೋಗು
ಚಂದದ ಹೆಣ್ಣೊಬ್ಬಳ ನಿನಗಾಗಿ ಹುಡುಕಿಕೊ'

ಅಷ್ಟೊಂದು ಖುಷಿಯಲ್ಲಿರುವ ಜನರ ನಾನೆಂದೂ ನೋಡಿರಲಿಲ್ಲ
ಲೋಟಗಳ ಮೇಲಕ್ಕೆತ್ತಿ ಅವರು
ಸ್ವಾಸ್ಥ್ಯ ಮತ್ತು ಸಾವನ್ನು ಸ್ತುತಿಸಿ ಹಾಡಿದರು
ಭಯಂಕರ ಹಾದರಿಗರು

ಲೋಕದಲ್ಲಿ ಅಲೆದು ಮರಳಿ ಬಂದಾಗ ನಾನು ಹೆಚ್ಚು ಮುದುಕನಾಗಿದ್ದೆ

ನಾನೀಗ ಬೇರೆಯವರನ್ನು ಪ್ರಶ್ನಿಸುವುದು ಬಿಟ್ಟುಬಿಟ್ಟಿದ್ದೇನೆ
ಆದರೆ, ನನ್ನ ತಿಳಿವಳಿಕೆ ಕಡಿಮೆಯಾಗುತ್ತಿದೆ ದಿನೇದಿನೇ.